‘ಹಾಗೆ ನೋಡಿದರೆ ಚಲಿಸುವ ಎಲ್ಲಾ ವಸ್ತುಗಳಿಗೂ ಜೀವ ಇದ್ದೇ ಇರುತ್ತದೆ. ಗಾಳಿ, ನೀರು, ಬೆಂಕಿ, ಭೂಮಿ, ಆಕಾಶ, ಬೆಳಕು ಎಲ್ಲವಕ್ಕೂ ಜೀವ ಇದೆ ಮತ್ತು ಜೀವ ಇರುವ ಎಲ್ಲಾ ವಸ್ತುಗಳೂ ಶಬ್ದ ಮಾಡುತ್ತವೆ. ಸೋ ಈ ವಿಮಾನಕ್ಕೂ ಜೀವ ಇದೆ. ಜೀವ ಇರುವ ಪ್ರತಿ ವಸ್ತುವಿಗೂ ತನ್ನ ಬಗ್ಗೆ ಎಚ್ಚರಿಕೆ ಇರುತ್ತದೆ...’ ನೀಲಾಂಜನಾಳ ಮಾತುಗಳು ಆಗಸದಲ್ಲಿ ತೇಲುತ್ತಿದ್ದ ವಿಮಾನದಂತೆ ಹಗುರವಾಗಿ ಕಿವಿಗೆ ಬೀಳುತ್ತಿದ್ದವು.

‘ಟನ್‌ಗಟ್ಟಲೇ ಭಾರವಿರುವ ವಿಮಾನ ಇಷ್ಟೊಂದು ಜನರನ್ನು ಹೊತ್ತು ಗಾಳಿಯಲ್ಲಿ ಹೇಗೆ ತೇಲುತ್ತಿದೆಯೋ...’ ನನಗೆ ನಾನೇ ಪಿಸುಗುಟ್ಟಿಕೊಂಡಿದ್ದ ಮಾತುಗಳು ನೀಲಾಂಜನಾಳ ಕಿವಿಗೂ ಬಿದ್ದಿದ್ದವು.

‘ಓಹ್, ಗಾಳಿ ಇದೆಯಲ್ಲ... ಅದು ಬೇರೆಲ್ಲವುಗಳಿಗಿಂತಲೂ ಬ್ರಹ್ಮಾಂಡದ ಅದ್ಭುತ ಸೃಷ್ಟಿ. ಗಾಳಿಯಿಂದಲೇ ನೀರು, ಬೆಂಕಿ, ಆಹಾರ ಮುಂತಾದ ಜೀವನವಶ್ಯಕ ಸರಕುಗಳು ಉತ್ಪಾದನೆಯಾಗುತ್ತಿರುವುದು. ಗಾಳಿ ನಿಜವಾಗಿಯೂ ಮಾಯೆ; ಅದೇ ಪ್ರಾಣ. ಕಣ್ಣಿಗೆ ಕಾಣದಿದ್ದರೂ ಗಾಳಿಯ **strength** ಮತ್ತು ವೇಗ ಇದೆಯಲ್ಲ ಅದು ನಿಜಕ್ಕೂ **unimaginable.** ನಮ್ಮ ಇವೊತ್ತಿನ ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲಾ ಆವಿಷ್ಕಾರಗಳೂ ಗಾಳಿಯಲ್ಲಿ ಲೀನವಾಗಿದ್ದವುಗಳೇ ಆಗಿವೆ, ಗಾಳಿಯಲ್ಲಿ ಇನ್ನೂ ಅದೆಷ್ಟು ಅಗೋಚರ ಅದ್ಭುತ ಸಂಗತಿಗಳು, ವಿದ್ಯಮಾನಗಳು ಅಡಗಿವೆಯೋ ಕಾಲವೇ ನಿರ್ಧರಿಸಬೇಕು. ನೀವು ಆಧುನಿಕ ಭಾರತದ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದೀರಿ. ಇಂಥ ಸಂಗತಿಗಳು ನಿಮ್ಮಲ್ಲಿ ಕುತೂಹಲ ಹುಟ್ಟಿಸತ್ತವೋ ಇಲ್ಲವೋ ಗೊತ್ತಿಲ್ಲ. ಜಗತ್ತಿನಾದ್ಯಂತ ಇಂದು ಕೆಲಸಕ್ಕೆ ಬಾರದ ಅಸಂಖ್ಯಾತ ಸರಕುಗಳನ್ನು ಉತ್ಪಾದಿಸುತ್ತಿರುವುದೇ ಮನುಷ್ಯನ **frustration**ಗೆ ಕಾರಣವಾಗಿದೆ...’ ನೀಲಾಂಜನಾಳ ಭೌತಶಾಸ್ತ್ರದ ಪ್ರಜ್ಞೆಯಲ್ಲಿ ಆರ್ಥಿಕ ಆಲೋಚನೆಗಳೂ ಅಡಗಿದ್ದವು.

‘**Exactly**. ಆಹಾರ ಮತ್ತು ಸೆಕ್ಸ್ ಮನುಷ್ಯನ ಅತ್ಯಂತ ಅನಿವಾರ್ಯ ಮತ್ತು ಮೂಲಭೂತ ಬಯಕೆಗಳು. ಇವೆರಡಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದಾಗ ಮನುಷ್ಯ ಅತ್ಯಂತ ಸುಖಿಯಾಗಿದ್ದ. ದೇಹವಿರುವ ಎಲ್ಲಾ ಪ್ರಾಣಿಪಕ್ಷಿಗಳಿಗೂ ಅಗಾಧವಾದ ಅನುಭೂತಿ ದಕ್ಕುವುದು ಹಸಿವು ಮತ್ತು ಕಾಮವನ್ನು ಈಡೇರಿಸಿಕೊಳ್ಳುವಾಗಲೇ. ಇತರೆ ಪ್ರಾಣಿಪಕ್ಷಿಗಳನ್ನು ಬಿಟ್ಟು ಇಂದು ಮನುಷ್ಯ ಅಸಂಖ್ಯ ಬಯಕೆಗಳ ಹಿಂದೆ ಬಿದ್ದು ಹಸಿವು ಮತ್ತು ಕಾಮಗಳ ಸಾಂದ್ರತೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಇದು ಜಗತ್ತಿನಾದ್ಯಂತ ಮನುಷ್ಯರನ್ನು ಆವರಿಸಿಕೊಂಡಿರುವ ಬಹು ದೊಡ್ಡ ವ್ಯಾಧಿ...’ ಅವಳ ಮಾತುಗಳಿಂದ ಉತ್ತೇಜಿತವಾಗಿ ನಾನೂ ಮಾತನಾಡಿದ್ದೆ.

‘ಫೆಂಟಾಸ್ಟಿಕ್...’ ಮೆಲ್ಲನೆ ಉಸುರಿದ್ದಳು ನೀಲಾಂಜನ.

‘ನೀನು ಖಂಡಿತವಾಗಿಯೂ ಸುಂದರಿ. ನಿನ್ನ ಜೊತೆಯಿಲ್ಲದಿದ್ದರೆ ನಾನು ಖಂಡಿತವಾಗಿಯೂ ವಿಮಾನವನ್ನು ಹತ್ತುತ್ತಿರಲಿಲ್ಲ. ಶ್ರೀಮಂತಿಕೆ, ಸೌಂದರ್ಯ, ಯವ್ವನ ಎಲ್ಲವೂ ಇದ್ದರೂ, ಅವುಗಳನ್ನು ಅನುಭವಿಸದೆ ಭತ್ತಕ್ಕೆ ತಗಲುವ ರೋಗಗಳ ಬಗ್ಗೆ, ರೈತರ ಆತ್ಮಹತ್ಯೆಗಳ ಬಗ್ಗೆ ತಲೆಕೆಡಿಸಿಕೊಂಡು ಅಲೆದಾಡುತ್ತಿರುವ ನಿನ್ನನ್ನು ನೋಡಿ ನಿಜಕ್ಕೂ ನಾನು ವಿಸ್ಮಯಗೊಂಡಿದ್ದೇನೆ. ರಾಘವ ಪಂತುಲು ಜೊತೆ ನಿನ್ನನ್ನು ನೋಡಿದಾಗಿನಿಂದ ಮತ್ತು ಪಂತುಲು ನಿನ್ನ ಬಗ್ಗೆ ಹೇಳಿದಾಗಿನಿಂದ ತುಂಬಾ ಕುತೂಹಲಗೊಂಡಿದ್ದೇನೆ. ಸೌಂದರ್ಯ, ಬುದ್ಧಿವಂತಿಕೆ ಮತ್ತು ಅಂತಃಕರಣ ಒಂದೇ ಹೆಣ್ಣಿನಲ್ಲಿ ಅನುಸಂಧಾನಗೊಳ್ಳುವುದು ತುಂಬ ಅಪರೂಪದ